

‘ವಾಯುಮಾಲಿನ್ಯ, ಜಲಮಾಲಿನ್ಯ, ಶಬ್ದಮಾಲಿನ್ಯಗಳ ಸಾಲಿಗೆ ಹೊಸ ಸೇರ್ಪಡೆ ತರಂಗಮಾಲಿನ್ಯ. ಅಂದರೆ ಫ್ರೀಕ್ವೆನ್ಸಿ ಪಲ್ಯೂಷನ್...’ ಎಂದು ಉತ್ತರ ಭಾರತದ ಯಾವುದೋ ಕುಗ್ರಾಮದಿಂದ ಹುಟ್ಟಿಬಂದಿದ್ದ ಸಂಚಿತ್ ವರ್ಮಾ ಹೇಳಿದಾಗ ಹಿಂದಿನ ಸಾಲಿನಲ್ಲಿ ಕುಳಿತಿದ್ದ ನಾನು ಗಹಗಹಿಸಿ ನಕ್ಕುಬಿಟ್ಟೆ. ಎಲ್ಲರ ಗಮನ ನನ್ನತ್ತ ಕೇಂದ್ರೀಕೃತವಾದಾಗ ಎಚ್ಚರಗೊಂಡವಳಂತೆ ಗಂಭೀರವಾಗಿ ಕುಳಿತೆ. ಸಂಚಿತ್, ‘ಯಾಕೆ ನಕ್ಕಿದ್ದು ಆವಂತಿಕಾ?’ ಎಂದು ಕೇಳಿದ್ದರೆ ಬಹುಶಃ ಇಷ್ಟುದ್ದ ಭಾಷಣವನ್ನೇ ಬಿಗಿಯುತ್ತಿದ್ದೆನೇನೋ! ಆದರೆ ಆತ, ಮೊದಲ ಬಾರಿಗೆ ಈ ಪದವನ್ನು ಕೇಳಿದಾಗ ತಾನೂ ಹೀಗೆ ನಕ್ಕಿದ್ದು ಎಂದು ಹೇಳಿ, ತನ್ನ ಮಾತನ್ನು ಮತ್ತೆ ತನ್ನ ಹಳಿಗೆ ಎಳೆದುಕೊಂಡ.

ದೇಶದ ವಿವಿಧ ಭಾಗಗಳಿಂದ ಬಂದಿದ್ದ ಸುಮಾರು ನಲವತ್ತು ಜನರಿಂದ ಕೂಡಿದ್ದ ತರಬೇತಿ ಕೊಠಡಿ ಅದಾಗಿತ್ತು. ವಿದ್ಯುನ್ಮಾನ ಕ್ಷೇತ್ರದಲ್ಲಿ ಕೆಲಸ ಮಾಡುವ ನಮ್ಮಂಥವರಿಗೆಂದೇ ಆ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಅದೇ ಓಜೋನ್ ಪದರ ನಾಶವಾಗಿರುವುದನ್ನು, ಗುಬ್ಬಚ್ಚಿಗಳು ನಗರಗಳಿಂದ ಪಲಾಯನಗೈದಿರುವುದನ್ನು ಪುಷ್ಟೀಕರಿಸುವಂತೆಯೇ ಮಾತಾಡುತ್ತಾರೆ ಎಂದುಕೊಂಡಿದ್ದರೆ, ಸಂಚಿತ್ ಅದರ ಬಗ್ಗೆ ಒಂದೇ ಒಂದು ಚಕಾರವನ್ನೂ ಎತ್ತದೇ ತನ್ನ ಎರಡು ಗಂಟೆಗಳ ಪಾಠವನ್ನು ಮುಗಿಸಿದ್ದ.

***

‘ನಾನು ನಿಮ್ಮ ಆರ್.ಜೆ., ಆವಂತಿಕಾ...’ ಎಂದು ಹೇಳುತ್ತಿದ್ದ ವಾಕ್ಯವೇ ಅತ್ಯಂತ ಪ್ರಸಿದ್ಧವಾಗಿ ಹೋಗಿತ್ತು. ಅನೇಕರು ಅದನ್ನು ಒಂದು ಸಿನಿಮಾದ ಡೈಲಾಗ್ ಎನ್ನುವಂತೆ ಅದೇ ಶೈಲಿಯನ್ನು ಅನುಕರಿಸುತ್ತಿದ್ದರು. ಅದು ಕನ್ನಡವಾಗಿರಲಿ, ಹಿಂದಿಯಾಗಿರಲಿ, ಇಂಗ್ಲಿಷೇ ಆಗಿರಲಿ, ಮಾತಿನ ಓಘದಲ್ಲಿ ಒಂದೇ ಒಂದು ಸಣ್ಣ ಉಚ್ಚಾರದ ತಪ್ಪನ್ನೂ ಗುರುತಿಸಲಾಗದ ಕೇಳುಗರು ನನ್ನ ಧ್ವನಿಯ ಮೋಡಿಗೆ ಮರುಳಾಗಿಹೋಗಿದ್ದರು. ನನ್ನ ನಾಲ್ಕು ಗಂಟೆಗಳ ಕಾರ್ಯಕ್ರಮವೆಂದರೆ ಒಂದೇ ಬಾರಿಗೆ ಸಾವಿರಾರು ಜನ ಎಫ್.ಎಂ.ಗೆ ಟ್ಯೂನ್ ಆಗಿಬಿಡುತ್ತಿದ್ದರು. ಸ್ಪಷ್ಟವಾದ ಉಚ್ಚಾರಣೆಗೆ ಹೆಸರಾದ ನನ್ನಿಂದ ಒಂದೇ ಒಂದು ನಾಲಿಗೆ ತೊಡರನ್ನಾದರೂ ಮಾಡಿಸಬೇಕಂತಲೇ ನೇರ ಕಾರ್ಯಕ್ರಮದ ಅನೇಕ ಶ್ರೋತೃಗಳು ಪಂದ್ಯಕಟ್ಟಿ ಸೋತಿದ್ದುದಾಗಿ ಹೇಳಿಕೊಳ್ಳುತ್ತಿದ್ದರು. ಅಷ್ಟೇ ಅಲ್ಲದೇ ನನ್ನ ಕಂಠದ, ನನ್ನ ಗಹಗಹಿಸುವ ನಗುವಿನ ಜೊತೆಗೆ ಒಟ್ಟಾರೆ ಕಾರ್ಯಕ್ರಮದಲ್ಲಿ ನಾನು ಆರಿಸಿಕೊಳ್ಳುತ್ತಿದ್ದ ವಿಷಯ, ಅದಕ್ಕೆ ಪೂರಕವಾಗಿ ಬಳಸಿಕೊಳ್ಳುತ್ತಿದ್ದ ಸಹೃದಯೀ ಹಾಡುಗಳಿಗೆ ಜನ ಮಾರುಹೋಗಿದ್ದರು. ರೇಡಿಯೊ ಜಾಕಿ ಅಂದರೆ ಆವಂತಿಕಾ, ಪ್ರೋಗ್ರಾಂ ಎಂದರೆ ಆವಂತಿಕಾಳ ಶೋ ಎಂಬಂತಾಗಿ ಹೋಗಿತ್ತು. ಅದಕ್ಕೆಂದೇ ನನಗೆ ಲಕ್ಷಾಂತರ ಅಭಿಮಾನಿಗಳ ಆಶೀರ್ವಾದವಿತ್ತು. ಸಾವಿರಾರು ಜನ ಜನಪ್ರಿಯತೆಗೆ ಇಲ್ಲಿ ಹೆಚ್ಚು ಅವಕಾಶವಿಲ್ಲವೆಂದು, ದೂರದರ್ಶನಕ್ಕೋ ಖಾಸಗಿ ಚಾನೆಲ್‌ಗೋ ಸೇರುವಂತೆ ಸಲಹೆ ನೀಡುತ್ತಿದ್ದರೆ, ನೂರಾರು ಜನ ನೇರಪ್ರಸಾರದಲ್ಲೇ ತಮ್ಮ ಪ್ರೇಮನಿವೇದನೆಗಳನ್ನು ಮಾಡಿಕೊಳ್ಳುತ್ತಿದ್ದರು. ಹತ್ತಾರು ಜನ, ನಾನು ಹೇಗಿದ್ದೀನಿ ಅಂಥ ನೋಡಬೇಕೆಂತಲೇ ಎಫ್.ಎಂ. ಸ್ಟೇಷನ್‌ನ ಬಾಗಿಲು ತಟ್ಟಿ ನಿರಾಶರಾಗಿ ಹೋಗಿದ್ದರು. ಏಕೆಂದರೆ ನನ್ನ ಒಂದೇ ಒಂದು ಫೋಟೊ ಕೂಡ ಹೊರಗೆ ಸಿಗದಂತೆ ನೋಡಿಕೊಂಡಿದ್ದೆ. ಫೇಸ್‌ಬುಕ್‌ನ, ವಾಟ್ಸ್